ದಿನಾಂಕಃ**05-03-2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.

ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಪಾಟೀಸವಾಲು ಮಾಡಲು ಅನುಮತಿ ನೀಡಲಾಯ್ತು.

ಪಾಟೀ ಸವಾಲುಃ **3** ನೇ ಎದುರುದಾರರ ಪರ ಶ್ರೀ ಸಿ.ಒ.ವೈ. ವಕೀಲರ ಪರವಾಗಿ ಶ್ರೀ ಎಂ.ಎಸ್. ಎನ್ .ವಕೀಲರಿಂದಃ

ನಾನು ಈಗ ಪಿ.ಎ.ಸಿ.ಎಸ್. ಹೇರೂರು ನಲ್ಲಿ ಕೆಲಸ ಮಾಡುತ್ತಿರುತ್ತೇನೆ. ನಾನು ಸದರಿ ಸಂಸ್ಥೆಯಲ್ಲಿ ಖಾಸಗಿ ನೌಕರಳಾಗಿ ಕೆಲಸ ಮಾಡುತ್ತಾ ಇರುತ್ತೇನೆ. 2024 ರ ನಂತರ ನನಗೆ ಸಂಬಳದಲ್ಲಿ ಯಾವುದೇ ವ್ಯತ್ಯಾಸ ಉಂಟಾಗಿರುವುದಿಲ್ಲ. ಅಪಘಾತ ಆಗುವ ಕಾಲಕ್ಕೆ ನಾನು ಪಿ.ಎ.ಸಿ.ಎಸ್. ಹೇರೂರು ನಲ್ಲಿ ಕೆಲಸ ಮಾಡುತ್ತಿದ್ದೆನು. ನಾನು ಸದರಿ ಸಂಸ್ಥೆಯಲ್ಲಿ ಮಾರಾಟ ಗುಮಾಸ್ಥೆಯಾಗಿ ಕೆಲಸ ನಿರ್ವಹಿಸುತ್ತಿದ್ದೆನು. ಅಪಘಾತ ಆಗುವ ಪೂರ್ವದಲ್ಲಿ ನಾನು ಆರು ತಿಂಗಳಿನಿಂದ ಸದರಿ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತಿದ್ದೆನು. ನನಗೆ ಅಪಘಾತ ಆಗುವ ಕಾಲದ ಮಾಸಿಕ ರೂ.14600/- ಸಂಬಳ ಬರುತ್ತಿತ್ತು. ಸದರಿ ನನ್ನ ಸಂಬಳದ ಹಣವನ್ನು ನನ್ನ ಬ್ಯಾಂಕ್ ಖಾತೆಗೆ ಜಮಾವಣೆ ಮಾಡುತ್ತಿದ್ದರು. ನನಗೆ ಮಾಸಿಕ ಸಂಬಳ ನನ್ನ ಅಕೌಂಟ್ ಗೆ ಬರುತ್ತಿತ್ತು ಎಂಬ ಬಗ್ಗೆ ನಾನು ಬ್ಯಾಂಕ್ ಖಾತೆ ಹಾಜರು ಮಾಡಿರುವುದಿಲ್ಲ ಆದರೆ ಸೊಸೈಟಿಯವರು ನೀಡಿದ ದೃಢೀಕರಣ ಪತ್ರ ಹಾಜರುಪಡಿಸಿರುತ್ತೇನೆ. ನನ್ನ ಬ್ಯಾಂಕ್ ಅಕೌಂಟ್ ಖಾತೆ ಎಕ್ಸ್ ಟ್ರಾಕ್ಟ್ ಅನ್ನು ಹಾಜರು ಪಡಿಸಲು ತೊಂದರೆ ಇರುವುದಿಲ್ಲ.

2. ನಾನು ಆ ದಿನ ನಮ್ಮ ಮಾವನ ಮನೆಯಿಂದ ನಮ್ಮ ಮನೆಗೆ ಹೋಗುತ್ತಿದ್ದೆನು. ನಾನು ಆ ದಿನ ರಸ್ತೆಯಲ್ಲಿ ನನ್ನ ಬಲಭಾಗಕ್ಕೆ ನಡೆದುಕೊಂಡು ಹೋಗುತ್ತಿದ್ದೆನು. ಆ ದಿನ ಕಾರು ನನ್ನ ಎದುರುಗಡೆಯಿಂದ ಎಡಭಾಗದಲ್ಲಿ ಬರುತ್ತಾ ಇತ್ತು. ಅಪಘಾತ ಆದ ಬಗ್ಗೆ ನಾನು ಪೊಲೀಸ್ ಠಾಣೆಗೆ ದೂರನ್ನು ಕೊಟ್ಟಿರುತ್ತೇನೆ. ಅಪಘಾತ ಆದಾಗ ನಾನು ಮೊದಲು ಜಯಪುರ ಆಸ್ಪತ್ರೆ, ನಂತರ ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ನಾನು 7 ದಿನಗಳ ಕಾಲ ಮಣಿಪಾಲ್ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ನನಗೆ ವೈದ್ಯಕೀಯ ವೆಚ್ಚಕಾಗಿ ರೂ.5 ಲಕ್ಷ ಖರ್ಚಾದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನನ್ನ ಮುಂದುವರೆದ ಚಿಕಿತ್ಸೆಗೆ ರೂ.3 ಲಕ್ಷ ಹಣದ ಅವಶ್ಯಕತೆ ಇರುವ ಬಗ್ಗೆ ವೈದ್ಯರು ನೀಡಿದ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ನಾನು ಹೆಚ್ಚಿನ ಪರಿಹಾರ ಪಡೆಯುವ ಸಲುವಾಗ ನನ್ನ ವೆಚ್ಚಕ್ಕೆ ಮತ್ತು ಮುಂದಿನ ಚಿಕಿತ್ಸೆಗೆ ಹಣ ಖರ್ಚಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಹೆಚ್ಚಿನ ಹಣ ಪಡೆಯುವ ಸಲುವಾಗಿ ನಾನು ವೈದ್ಯರ ಜೊತೆ ಸೇರಿಕೊಂಡು ಹೆಚ್ಚಿನ ಅಂಗನ್ಯೂನ್ಯತಾ ಪ್ರಮಾಣ ಪತ್ರ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಅಪಘಾತದಿಂದ ಸಾಮಾನ್ಯ ಸ್ವರೂಪದ ಗಾಯಗಳು ಆಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತಕ್ಕಿಂತ ಮೊದಲು ನಾನು ಯಾವ ರೀತಿ ಕೆಲಸ ಮಾಡುತ್ತಾ ಇದ್ದೆನೋ ಈಗಲೂ ಸಹ ಅದೇ ರೀತಿ ಕೆಲಸ ಮಾಡಲು ಶಕ್ತಳಿರುತ್ತೇನೆ ಎಂದರೆ ಸರಿಯಲ್ಲ. ನನ್ನ ವೇತನದಲ್ಲಿ ಯಾವುದೇ ಬದಲಾವಣೆ ಆಗಿರುವುದಿಲ್ಲ ಎಂದರೆ ಸರಿ. ನನಗೆ ಯಾವುದೇ ರೀತಿಯ ಶಾಶ್ವತ ಅಂಗನ್ಯೂನ್ಯತೆ ಉಂಟಾಗಿರುವುದಿಲ್ಲ ಎಂದರೆ ಸರಿಯಲ್ಲ. ವೈದ್ಯಕೀಯ ಬಿಲ್ ಗಳನ್ನು ಹಾಗೂ ದಾಖಲೆಗಳನ್ನು ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಸೃಷ್ಟಿಮಾಡಿ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-28 ರಿಂದ 30 ದಾಖಲೆಗಳ್ನು ಈ ಅರ್ಜಿಗೊಸ್ಕರ ಸೃಷ್ಟಿಮಾಡಿ ಹಾಜರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-28 ರಿಂದ 30 ರ ದಾಖಲೆಯಲ್ಲಿ ವಾಹನದ ನೋಂದಣಿ ಸಂಖ್ಯೆ ಮತ್ತು ಎಷ್ಟು ದೂರ ಹೋದ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ನಿಪಿ-28 ರಿಂದ 30 ರ ದಾಖಲೆಯಲ್ಲಿ ಯಾವುದೇ ಸೀಲುಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಾರ್ ಚಾಲಕನ ನಿರ್ಲಕ್ಷತನದಿಂದ ಅಪಘಾತ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತ ರಾತ್ರಿ 12.40 ರ ಸುಮಾರಿಗೆ ಆಗಿರುತ್ತದೆ. ಆ ದಿನ ನಾನು ರಸ್ತೆಯಲ್ಲಿ ಹೋಗುತ್ತಿರುವಾಗ ಬೀದಿ ದೀಪ ಇರಲಿಲ್ಲ ಎಂದರೆ ಸರಿ. ನಾನು ರಸ್ತೆಯ ಮಧ್ಯ ಭಾಗದಲ್ಲಿ ನಡೆದುಕೊಂಡು ಹೋಗುತ್ತಿದ್ದು ನನ್ನ ತಪ್ಪಿನಿಂದ ಅಪಘಾತ ಉಂಟಾಗಿರುತ್ತದೆ ಎಂದರೆ ಸರಿಯಲ್ಲ. 3ನೇ ಎದುರುದಾರರು ಯಾವುದೇ ರೀತಿಯ ಪರಿಹಾರ ಕೊಡಲು ಬಾಧ್ಯಸ್ಥರು ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಃಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ